ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 10–8–2017

# ಪತ್ರಿಕಾ ಆಮಂತ್ರಣ

1. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆ ಬಗ್ಗೆ ಪರಿಶೀಲನೆ:

ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ದಿನಾಂಕ: 11–8–2017 ಶುಕ್ರವಾರ, ಸಮಯ: ಬೆಳಿಗ್ಗೆ 10–15 ಗಂಟೆಗೆ

ಸ್ಥಳ : ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಚೇರಿ, ಜಲಸಂಪನ್ಮೂಲ ಇಲಾಖೆ, 3 ನೇ ಮಹಡಿ, ವಿಕಾಸ ಸೌಧ, ಬೆಂಗಳೂರು

2. ಡಾ: ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿ ಅನಾವರಣ ಹಾಗೂ ಡಾ: ಬಿ.ಆರ್. ಅಂಬೇಡ್ಕರ್ ಭವನ ಉದ್ಘಾಟನೆ ಹಾಗೂ ದೇವನಹಳ್ಳಿಯಿಂದ ವಿಜಯಪುರ–ವೇಮಗಲ್ ಮಾರ್ಗ ಕೋಲಾರ ಕಾರಿಡಾರ್ ರಸ್ತೆ ಅಭಿವೃದ್ಧಿ ಕಾಮಗಾರಿ ಶಂಕುಸ್ಥಾಪನೆ ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಕ್ರಮ ಉದ್ಘಾಟನೆ:

ಉದ್ಘಾಟನೆ:
ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 11–08–2017 ಶುಕ್ರವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಜೂನಿಯರ್ ಕಾಲೇಜು ಕ್ರೀಡಾಂಗಣ, ದೇವನಹಳ್ಳಿ ಟೌನ್.

ವಿ.ಸೂ.: ವಾರ್ತಾ ಸೌಧದಿಂದ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದೆ. ವಾಹನವು ಅಂದು ಬೆಳಿಗ್ಗೆ 8–30 ಗಂಟೆಗೆ ನಿಗದಿತ ಸ್ಥಳದತ್ತ ತೆರಳಲಿದೆ. (ಸಂಪರ್ಕ: ಪಿ.ಎಂ. ಚಂದ್ರಮೌಳೀಶ್ವರ ಸ್ವಾಮಿ 9448509489)

# ಪತ್ರಿಕಾ ಪ್ರಕಟಣೆ

44/44

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು ಆಗಸ್ಟ್ 10 (ಕರ್ನಾಟಕ ವಾರ್ತೆ)**

**ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.** ದಿನಾಂಕ: 13-08-2017ರ **ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.**

1) **ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ **ಶೀರ್ಷಿಕೆಯಡಿ** ಶ್ರೀಮತಿ. ರಮಾಬಾಯಿ ಮತ್ತು ತಂಡ, ದಕ್ಷಿಣ ಕನ್ನಡ ಜಿಲ್ಲೆ ರವರಿಂದ ಶಾಸ್ತ್ರೀಯ ಸಂಗೀತ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

2) **ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ **ಶೀರ್ಷಿಕೆಯಡಿ** ಶ್ರೀ. ರಘು ರಾಂ ಮತ್ತು ತಂಡ, ಟಿ. ನರಸೀಪುರ ರವರಿಂದ ಬಾವಗೀತೆ ಸಂಗೀತ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

3) **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ** ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

4) **ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ** ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ **ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.**

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

## I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ** ಯೂನಿವರ್ಸ್ ಆರ್ಟ್ ಫೌಂಡೇಶನ್ **ಸಂಸ್ಥೆಯ ಸಹಯೋಗದೊಂದಿಗೆ ನಂದಿಕೇಶ್ವರ ನೃತ್ಯಾಲಯ, ಬೆಂಗಳೂರು ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ** ಶ್ರೀವಾಣಿ ವಿದ್ಯಾ ಕೇಂದ್ರ, ರಾಜಾಜಿನಗರ, ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

## II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಿಗ್ಗೆ 6.30 ರಿಂದ ಬೆಳಿಗ್ಗೆ 10.00 ಗಂಟೆಯವರೆಗೆ ದಿ ಹಿಂದೂ ಗ್ರೂಪ್ ವತಿಯಿಂದ **"ಸೈಕಲ್ ಡೇ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಜುಂಬಾ, ಯೋಗಾ, ಸೈಕಲ್ ರ್‍ಯಾಲಿ, ರೀಡಿಂಗ್ ಜೋನ್ ಹಾಗೂ ಇತರೇ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

45/45

## ಮೂಲ ದಾಖಲೆ ಪರಿಶೀಲನೆ

**ಬೆಂಗಳೂರು, ಆಗಸ್ಟ್ 10 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿ: 03-03-2016 ರಲ್ಲಿ ಅಧಿಸೂಚಿಸಿರುವ ಪೌರಾಡಳಿತ ಇಲಾಖೆಯ ಮಹಾನಗರ ಪಾಲಿಕೆಗಳಲ್ಲಿನ ಲೆಕ್ಕಿಗರು 54- (47+07 ಹೈ.ಕ) ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಹಾಗೂ ಆಯೋಗದ ಅಧಿಸೂಚನೆ ದಿನಾಂಕ 5-10-2016 ರಲ್ಲಿ ಮತ್ತು ಸೇರ್ಪಡೆ ಅಧಿಸೂಚನೆ ದಿನಾಂಕ: 22-10-2016 ರಲ್ಲಿ ಅಧಿಸೂಚಿಸಲಾಗಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಉರ್ದು ಶಿಕ್ಷಕರು 41 (30 + 11 ಹೈ.ಕ.) ಹುದ್ದೆಗಳ 1:2 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿ: 8-8-2017 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.**

**46/46**

## ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ

**ಬೆಂಗಳೂರು, ಆಗಸ್ಟ್ 10 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದ ಹೆಬ್ಬಾಳ- ನಾಗವಾರ ವ್ಯಾಲಿಯಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿನ ವಿವಿಧ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 11 ರಂದು ಬೆಳಿಗ್ಗೆ 11-00 ಗಂಟೆಗೆ ಜೂನಿಯರ್ ಕಾಲೇಜು ಕ್ರೀಡಾಂಗಣ, ದೇವನಹಳ್ಳಿ ಟೌನ್ ಇಲ್ಲಿ ಉದ್ಘಾಟಿಸುವರು ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವ ಟಿ.ಬಿ. ಜಯಚಂದ್ರ ಅವರು ತಿಳಿಸಿದರು.

ಅವರು ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ಯೋಜನೆಯಿಂದ ಬೆಂಗಳೂರು ನಗರದ ಹೆಬ್ಬಾಳ-ನಾಗವಾರ ಕಣಿವೆಯ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಚಿಕ್ಕಬಳ್ಳಾಪುರ, ಬೆಂಗಳೂರು ನಗರ

ಮತ್ತು ಗ್ರಾಮಾಂತರ ಮೂರು ಜಿಲ್ಲೆಗಳ 65 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯಾಗಿ ಸುಮಾರು 883.54 ಕೋಟಿ ಮೊತ್ತದಲ್ಲಿ ಕೆರೆಗಳನ್ನು ತುಂಬಿಸಲು ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಈ ಯೋಜನೆಯಿಂದ ಮೂರು ಸಂಸ್ಕರಣಾ ಘಟಕಗಳಿಂದ ಪ್ರತಿನಿತ್ಯ 210 ದಶಲಕ್ಷ ಲೀಟರ್ ನೀರು ಲಭ್ಯವಾಗಲಿದ್ದು, ಈ ನೀರನ್ನು ಕೊಂಡೊಯ್ಯಲು 5 ಪಂಪ್‌ಹೌಸ್‌ಗಳ ಮುಖಾಂತರ ಪಂಪ್ ಮಾಡಲಾಗುತ್ತಿದ್ದು, ಏರು-ಗುರುತ್ವ ಕೊಳವೆಗಳ ಮೂಲಕ ಎತ್ತರದ ಪ್ರದೇಶದಲ್ಲಿನ ಕೆರೆಗೆ ತುಂಬಿಸಿ ನಂತರ ಸರಣಿಯಲ್ಲಿನ ಕೆರೆಗಳಿಗೆ ಸ್ವಾಭಾವಿಕ ನಾಲೆಯ ಮೂಲಕ ನೀರನ್ನು ತುಂಬಿಸಲು ಯೋಜಿಸಲಾಗಿದೆ.

ಈ ಯೋಜನೆಯ ನೀರಿನ ಮೂಲವೆಂದರೆ ಹೆಬ್ಬಾಳ-ನಾಗವಾರ ಕಣಿವೆಯಲ್ಲಿ ಹೆಬ್ಬಾಳ ಎಸ್.ಟಿ.ಪಿ. ಯಿಂದ 150 ಎಂ.ಎಲ್.ಡಿ. ಹೆಣ್ಣೂರು ಎಸ್.ಟಿ.ಪಿ. ಯಿಂದ 40 ಎಂ.ಎಲ್.ಡಿ. ಹೊರಮಾವು ಎಸ್.ಟಿ.ಪಿ. ಯಿಂದ 20 ಎಂ.ಎಲ್.ಡಿ. ನೀರನ್ನು ಸಂಗ್ರಹಿಸಿ ಒಟ್ಟಾರೆಯಾಗಿ ಲಭ್ಯವಾಗುವ 210 ಎಂ.ಎಲ್.ಡಿ. ನೀರನ್ನು ಹೆಣ್ಣೂರು-ಬಾಗಲೂರು ರಸ್ತೆಯ ಮಾರ್ಗವಾಗಿ ಏರು/ಗುರುತ್ವ ಕೊಳವೆಗಳ ಮೂಲಕ ಬಾಗಲೂರು ಕೆರೆಗೆ ಹರಿಸಲು ಯೋಜಿಸಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ 12 ಕೆರೆಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ 9 ಕೆರೆಗಳು, ಚಿಕ್ಕಬಳ್ಳಾಪುರ ಜಿಲ್ಲೆಯ 44 ಕೆರೆಗಳು ಒಟ್ಟು 65 ಕೆರೆಗಳು ಈ ಯೋಜನೆಯಡಿ ಬರುತ್ತವೆ.

ಈ ಯೋಜನೆಯಿಂದ ವರ್ಷಕ್ಕೆ ಸುಮಾರು 2.70 ಟಿ.ಎಂ.ಸಿ. ನೀರು ಲಭ್ಯವಾಗಲಿದ್ದು, ಈ ನೀರಿನೊಂದಿಗೆ ಈ ಭಾಗದ ವಾರ್ಷಿಕ ವಾಡಿಕೆ ಮಳೆಯಿಂದ ಲಭ್ಯವಾಗುವ ನೀರೂ ಸೇರಿದಲ್ಲಿ ಕೆಳಭಾಗದ ಅನೇಕ ಕೆರೆಗಳು ತುಂಬಲಿದ್ದು ಕೆಳಭಾಗದ ಗ್ರಾಮಗಳ ರೈತಾಪಿ ವರ್ಗಕ್ಕೂ ಯೋಜನೆಯಿಂದ ಅನುಕೂಲವಾಗಲಿದೆ. ಮುಂದಿನ ಹಂತದಲ್ಲಿ ಈ ಯೋಜನೆಯಲ್ಲಿ ತುಂಬಿದ ಕೆರೆಗಳಿಂದ ಇತರ ಕೆರೆಗಳಿಗೆ ಸಣ್ಣಪ್ರಮಾಣದ ವೆಚ್ಚದಲ್ಲಿಯೇ ಅನೇಕ ಕೆರೆಗಳನ್ನು ತುಂಬುವ ಆಶಯವನ್ನೂ ಹೊಂದಲಾಗಿದೆ.

ಈ ನಿಟ್ಟಿನಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನೂ ಮರುಬಳಕೆ ಮಾಡಿಕೊಳ್ಳುವ ಯೋಜನೆಗಳನ್ನು ಕೈಗೊಳ್ಳುವ ರಾಜ್ಯಗಳ ಪೈಕಿ ಅಗ್ರಮಾನ್ಯ ರಾಜ್ಯವಾಗಿ ನಮ್ಮ ಕರ್ನಾಟಕ ಹೊರಹೊಮ್ಮುತ್ತಿದೆ ಎಂದು ತಿಳಿಸಿದರು.

## ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಹೆಚ್ಚಳ

**ಬೆಂಗಳೂರು, ಆಗಸ್ಟ್ 10 (ಕರ್ನಾಟಕ ವಾರ್ತೆ)**

ಮೀನುಗಾರರ ಮರಣ ಪ್ರಕರಣಗಳಿಗೆ ರೂ. 2.00 ಲಕ್ಷ ದಿಂದ 3.00 ಲಕ್ಷಕ್ಕೆ, ಸಮುದ್ರದಲ್ಲಿ ಮರಣಹೊಂದಿದ ಪ್ರಕರಣಗಳಿಗೆ ರೂ. 5.00 ಲಕ್ಷದಿಂದ ರೂ. 6.00 ಲಕ್ಷಕ್ಕೆ ಏರಿಸಲು, ಬಲೆ ಮತ್ತು ಆಸ್ತಿ ಹಾನಿ, ದೋಣಿ ಹಾನಿ ಪ್ರಕರಣಗಳಿಗೆ ರೂ. 50,000/- ದಿಂದ ರೂ. 1.00 ಲಕ್ಷಕ್ಕೆ ಏರಿಸಲು ಹಾಗೂ ವೈದ್ಯಕೀಯ ವೆಚ್ಚವನ್ನು ರೂ. 50,000/- ದಿಂದ ರೂ. 1.00 ಲಕ್ಷಕ್ಕೆ, ವಿಮೆ ಪರಿಹಾರ ಪಡೆಯದ ಪ್ರಕರಣಗಳಿಗೆ ರೂ. 80,000/- ದಿಂದ ರೂ. 1.20 ಲಕ್ಷಕ್ಕೆ ಏರಿಸಲು ತೀರ್ಮಾನಿಸಲಾಯಿತು.

ಇತ್ತೀಚಿಗೆ ಮೀನುಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಹೊಸದಾಗಿ ಪುನರ್ ರಚನೆಯಾದ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಮಿತಿ ಸಭೆ ನಡೆಯಿತು. ಸಭೆಯಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ಪರಿಹಾರ ಮೊತ್ತವನ್ನು ಪರಿಷ್ಕರಿಸಲಾಯಿತು.

ಸಮುದ್ರದಲ್ಲಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಪ್ರಾಣ ರಕ್ಷಣೆ ಮಾಡಿದ ಮೀನುಗಾರರಿಗೆ ಹಾಗೂ ಪ್ರಾಣ ರಕ್ಷಣೆ ಮಾಡಿದ ದೋಣಿಯ ತಾಂಡೇಲರಿಗೆ ಶೌರ್ಯ ಪ್ರಶಸ್ತಿಯ ಜೊತೆಗೆ ರೂ. 50,000/- ಪುರಸ್ಕಾರ ನೀಡಿ ಗೌರವಿಸಲು ಸಭೆಯು ತೀರ್ಮಾನಿಸಿತು.

ಅದೇ ರೀತಿ ಯಾಂತ್ರೀಕೃತ ದೋಣಿ ಮಾಲೀಕರು ಪಡೆಯುತ್ತಿರುವ ಡಿಸೇಲ್ ಮೇಲಿನ ಮಾರಾಟ ಕರ ಮರುಪಾವತಿ ಸಹಾಯಧನದಲ್ಲಿ ಶೇ. 1.5 ಬದಲಿಗೆ ಶೇ 1 ರಷ್ಟು ಮೊತ್ತವನ್ನು ಮಾತ್ರ ಸಂಕಷ್ಟ ಪರಿಹಾರ ನಿಧಿಗೆ ಪಾವತಿಸಲು ಸಭೆಯು ತೀರ್ಮಾನಿಸಿತು.

ಸಭೆಯಲ್ಲಿ ಸಮಿತಿಯ ಸದಸ್ಯರಾದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಪರ ಕಾರ್ಯದರ್ಶಿಗಳಾದ ಶ್ರೀಮತಿ ಲೀಲಾವತಿ, ಉತ್ತರ ಕನ್ನಡ ಜಿಲ್ಲಾ ಕನ್ನಡ ಜಿಲ್ಲಾ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿಯು ಅಧ್ಯಕ್ಷರಾದ ಶ್ರೀ ಗಣಪತಿ ಮಾಂಗ್ರೆ, ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿಯ ಅಧ್ಯಕ್ಷ ಮಾದೇಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಎಂದು ಮೀನುಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.